ಆದರೂ ಮಾನ್ಯ ಅಧ್ಯಕ್ಷರೇ, ನಾನು ಮಾತನಾಡಬೇಕೋ ಬೇಡವೋ ಎಂದು ತಾವು ತೀರ್ಮಾನ ಮಾಡಬೇಕು. ಇನ್ನು ಮುಂದೆ ಯಾವುದಾದರೂ ಒಂದು ನನಗೆ ಅನಾವಶ್ಯಕವಾದ ಇಂಟರಪ್‌ಷನ್ ಬಂದರೆ ಆದನ್ನು ನಾನು ದಯವಿಟ್ಟು ಸಹಿಸುವುದಿಲ್ಲ. ಆದು ಆಗುವುದಿಲ್ಲ. ತಾವು ಏನು ತಿಳಿದುಕೊಂಡಿದ್ದೀರಿ? ಕಾಂಗ್ರೆಸ್ ಪಾರ್ಟಿ ಮೀಟಿಂಗ್‌ನಲ್ಲಿ ಮಾಡಿದಹಾಗೆ ಇಲ್ಲಿ ನೀವು ಮಾಡುವುದಕ್ಕಾಗುವುದಿಲ್ಲ. ಅನಾಗರೀಕ ವರ್ತನೆ ಮಾಡುವುದಕ್ಕಾಗುವುದಿಲ್ಲ ಇಲ್ಲಿ. ನಾಚಿಕೆ ಆಗಬೇಕು. ಯಾವ ರೀತಿ ವ್ಯವಹಾರ ಆಗುತ್ತಿದೆ ಇವತ್ತು.

(ಗೊಂದಲ)

ಅಧ್ಯಕ್ಷರು :- ತಾವೆಲ್ಲರೂ ಕುಳಿತುಕೊಳ್ಳಿ. ಈಗ ಸಭೆಯ ಕಾರ್ಯಕಲಾಪಗಳನ್ನು ನಡೆಸಬೇಕೋ, ಬಿಡಬೇಕೋ? ಈಗ ನಾನು ಮಾನ್ಯ ಹೆಗಡೆಯವರನ್ನು ಕರೆದಿದ್ದೇನೆ. ತಾವು ಪದೇ ಪದೇ ಹೀಗೆ ಮಾತನಾಡಿದರೆ ಅವರಿಗೆ ಮಾತನಾಡುವುದಕ್ಕೆ ಆಗುವುದಿಲ್ಲ. ತಾವು ಹೇಳುವುದೆಲ್ಲಾ ನನಗೆ ಗೊತ್ತಿದೆ. ಅವರು ಮಾತನಾಡಿದ ನಂತರ ತಮ್ಮ ನಾಯಕರು ಉತ್ತರ ಕೊಡುತ್ತಾರೆ. ತಮಗೆ ಅವಕಾಶ ಬಂದಾಗ ತಾವು ಹೇಳಿ. ಆದ್ದರಿಂದ ಅವರ ಭಾಷಣಕ್ಕೆ ತಾವು ಪದೇಪದೇ ಆಕ್ಷೇಪಣೆ ಎತ್ತಬಾರದು ಎಂದು ನಾನು ತಮಗೆ ಹೇಳುತ್ತೇನೆ.

ಶ್ರೀ ರಾಮಕೃಷ್ಣಹೆಗಡೆ :- ಮಾನ್ಯ ಅಧ್ಯಕ್ಷರೇ, ನಾನು ಯಾರ ಮೇಲೂ ಕೂಡ ಆಪಾದನೆ ಮಾಡಲಿಲ್ಲ.

SRI C.S. NADAGOWDA: Sir, I want to brief certain facts.

(ಗೊಂದಲ)

ಅಧ್ಯಕ್ಷರು: ಮಾನ್ಯ ನಾಡಗೌಡರೇ, ತಾವು ಕುಳಿತುಕೊಳ್ಳಿ. ನೀವು ಹೇಳಿದ್ದು .ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ.

ಗೊಂದಲ

(ಈ ಹಂತದಲ್ಲಿ ವಿರೋಧಪಕ್ಷದ (ಜನತಾದಳ) ಸದಸ್ಯರು ಧರಣಿ ಮಾಡಲು ಬಾವಿಯೊಳಗೆ ಬಂದರು)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾನು ನಿಂತಿದ್ದೇನೆ, ತಾವು ಕುಳಿತುಕೊಳ್ಳಿ.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದು ಕಾಂಗ್ರೆಸ್ ಪಕ್ಷಕ್ಕೆ ಗೌರವ ತರುವುದಿಲ್ಲ. ಅನಾಗರೀಕ ಸಂಸ್ಕೃತಿಯನ್ನು ರೌಡಿಸಂ ಅನ್ನು ತೋರಿಸುತ್ತಿದ್ದಾರೆ. ರಾಜ್ಯದ ಜನತೆ ನೋಡುತ್ತಿದ್ದಾರೆ. ಇವತ್ತು ನಾವೇನು ಅವಿಶ್ವಾಸ ನಿರ್ಣಯವನ್ನು ತಂದು ಪರಿಣಾಮಕಾರಿಯಾಗಿ ಯಾವುದೇ ಗದ್ದಲವಿಲ್ಲದೆ ಮಾತನಾಡುತ್ತಿದ್ದರೆ ಉದ್ದೇಶಪೂರ್ವಕವಾಗಿ ರಾಜಕೀಯ ಮಾಡತಕ್ಕ ರೀತಿಯಲ್ಲಿ ಕೆಲವರು ಮಾತನಾಡುತ್ತಿದ್ದಾರೆ. ಇದು ರಾಜ್ಯಕ್ಕೆ ದ್ರೋಹ; ಈ ಸಭೆಗೆ ದ್ರೋಹ, ಇದು ಕಾಂಗ್ರೆಸ್ ಪಕ್ಷಕ್ಕೆ ನಾಚಿಕೆಗೇಡು ಎಂದು ಹೇಳುತ್ತಿದ್ದೇನೆ. ಇದು ಸರಿಯಾದ ರೀತಿಯಲ್ಲ. ಇದನ್ನು ಪ್ರತಿಭಟಿಸುವುದಕ್ಕೋಸ್ಕರವಾಗಿ ನಾವು ಧರಣಿ ಮಾಡುತ್ತಿದ್ದೇವೆ. ಎರಡನೆಯದು ಅಧ್ಯಕ್ಷ ಪೀಠಕ್ಕೆ ಅಗೌರವವನ್ನು ಉಂಟು ಮಾಡುತ್ತಿದ್ದಾರೆ. ಪದೇಪದೇ ತಾವು ಎದ್ದು ನಿಂತರೂ ಸಹ ಅಧ್ಯಕ್ಷರಿಗೆ ಅವಮಾನ ಮಾಡುತ್ತಿದ್ದಾರೆ. ಇದು ಅತ್ಯಂತ ನಾಚಿಕೆಗೇಡು. ಇಂತಹ ಸಭೆಯನ್ನು ನಡೆಸುವ ಬದಲು ನಾನು ತಮ್ಮಲ್ಲಿ ಕೈಮುಗಿದು ಕೇಳುತ್ತಿದ್ದೇನೆ ಸಭೆಯನ್ನು ಮುಂದಕ್ಕೆ ಹಾಕಿ.